# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1282 |
| ಉತ್ತರಿಸುವ ದಿನಾಂಕ | 19-03-2025 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉಪ ನೋಂದಣಿ ಕಛೇರಿಯಲ್ಲಿ ಬಳಸುವ ಕಾವೇರಿ 2 ಸಾಫ್ಟ್‌ವೇರ್ ತಾಂತ್ರಿಕ ದುರಸ್ಥಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕಾವೇರಿ ತಂತ್ರಾಂಶವನ್ನು ಯಾರು ನಿರ್ವಹಣೆ ಮಾಡುತ್ತಿದ್ದಾರೆ; ಈ ನಿರ್ವಹಣೆಗೆ ಸರ್ಕಾರ ಪಾವತಿಸುತ್ತಿರುವ ಮೊತ್ತವೆಷ್ಟು; (ವಿವರ ನೀಡುವುದು) | 1) 2025ನೇ ಸಾಲಿನಲ್ಲಿ ಕಾವೇರಿ-2.0 ತಂತ್ರಾಂಶದ ಮೇಲೆ Distributed Denial of Service (DDoS) Attack ನಿಂದಾಗಿ ದಿನಾಂಕ:06-01-2025 ರಿಂದ 05-02-2025 ರವರೆಗೆ ಋಣಭಾರ ಪ್ರಮಾಣ ಪತ್ರ ಸೇವೆಯಲ್ಲಿ, ಹಾಗೂ ದಿನಾಂಕ:30-01-2025 ರಿಂದ 04-02-2025 ರವರೆಗೆ ದಸ್ತಾವೇಜುಗಳ ನೋಂದಣಿ ಸೇವೆಯಲ್ಲಿ ವ್ಯತ್ಯಯವಾಗಿರುತ್ತದೆ. ಈ ಸಮಸ್ಯೆಯನ್ನು ಸೆಂಟರ್ ಫಾರ್ ಸ್ಮಾರ್ಟ್ ಗೌರೆನ್ಸ್ ಸಂಸ್ಥೆಯು ಈಗಾಗಲೇ ಪರಿಹರಿಸಿದ್ದು, ಹಾಗೂ ಮುಂದೆ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲಾಗಿದೆ. ಅಲ್ಲದೇ ಸದರಿ ಪ್ರಕರಣದ ಬಗ್ಗೆ ಸೈಬರ್ ಕ್ರೈಂ ಪೋಲಿಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಲಾಗಿದೆ.<br><br>2) ಕಾವೇರಿ-2.0 ತಂತ್ರಾಂಶವನ್ನು ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇ-ಆಡಳಿತ ಕೇಂದ್ರದ ಅಧೀನದಲ್ಲಿ ಬರುವ ಸೆಂಟರ್ ಫಾರ್ ಸ್ಮಾರ್ಟ್ ಗೌರೆನ್ಸ್ ಸಂಸ್ಥೆಯು ಅಭಿವೃದ್ಧಿ ಪಡಿಸಿ ನಿರ್ವಾಹಣೆ ಮಾಡುತ್ತಿರುತ್ತದೆ.<br><br>3) ಕಾವೇರಿ-2.0 ತಂತ್ರಾಂಶವನ್ನು ಸೆಂಟರ್ ಫಾರ್ ಸ್ಮಾರ್ಟ್ ಗೌರ್ನೆನ್ಸ್ ಸಂಸ್ಥೆಯು ಏಕೀಕೃತ ಭೂ ನಿರ್ವಹಣೆ ವ್ಯವಸ್ಥೆಯ (Unified Land Management System-ULMS) ರ ಭಾಗವಾಗಿ ಅಭಿವೃದ್ಧಿಪಡಿಸುತ್ತಿದ್ದು ಇದಕ್ಕೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಯಾವುದೇ ವೆಚ್ಚವನ್ನು ಭರಿಸುತ್ತಿರುವುದಿಲ್ಲ. |
| ಆ) | ಬೆಂಗಳೂರು ನಗರದಲ್ಲಿ ಇ-ಖಾತೆ ಕಡ್ಡಾಯದಿಂದಾಗಿ ವಸತಿಯೋಗ್ಯ ಬಹು ಮಹಡಿ ಕಟ್ಟಡಗಳ ಪ್ಲಾಟ್‌ಗಳ ಮಾರಾಟ ಮತ್ತು ನೋಂದಣಿಗೆ ಅಡಚಣೆಯಾಗಿರುವುದು | ಕಾವೇರಿ-2.0 ತಂತ್ರಾಂಶದಲ್ಲಿ ಇ-ಖಾತಾ ಇರುವ ಅಪಾರ್ಟ್‌ಮೆಂಟ್ / ಫ್ಲ್ಯಾಟ್‌ಗಳ ನೋಂದಣಿಯಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ.<br><br>ಕಾವೇರಿ-2 ತಂತ್ರಾಂಶದೊಂದಿಗೆ ಭೂಮಿ, ULMS, ಮೋಜಿಣಿ, ಇ-ಸ್ವತ್ತು ಮತ್ತು ಇ-ಆಸ್ತಿ ತಂತ್ರಾಂಶದ ಸಂಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಎಲ್ಲಾ |

<table>
<tr>
<td></td>
<td>ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾವೇರಿ ತಂತ್ರಾಂಶವನ್ನು ಸೂಕ್ತ ರೀತಿಯಲ್ಲಿ ಉನ್ನತೀಕರಿಸದ ಕಾರಣ ಸಾರ್ವಜನಿಕರು ಅನುಭವಿಸುತ್ತಿರುವ ಸಮಸ್ಯೆಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; (ವಿವರ ನೀಡುವುದು)</td>
<td>ರೀತಿಯ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಲು ರಾಜ್ಯಮಟ್ಟದ ಉನ್ನತ ಸಮಿತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 27-11-2024 ರಂದು ರಚಿಸಲಾಗಿದೆ ಹಾಗೂ ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹ-ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ದಿನಾಂಕ:04-02-2025ರಲ್ಲಿ ಸಮಿತಿಯನ್ನು ರಚಿಸಲಾಗಿದೆ.</td>
</tr>
<tr>
<td>ಇ)</td>
<td>ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನೋಂದಣಿ ಕಛೇರಿಯಲ್ಲಿ ಎಷ್ಟು ಫ್ಲಾಟ್‌ಗಳ ಮಾರಾಟ ನೋಂದಣಿಯಾಗಿದೆ; ಇದರಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು? (ವರ್ಷವಾರು ವಿವರ ನೀಡುವುದು)</td>
<td>ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನೋಂದಣಿ ಕಛೇರಿಗಳಲ್ಲಿ ಮಾರಾಟವಾದ ಫ್ಲಾಟ್‌ಗಳ ಸಂಖ್ಯೆ ಈ ಕೆಳಕಂಡಂತಿರುತ್ತವೆ:-
<table>
<tr><th colspan="5">Sale of Flat/Apartment in Bangalore Urban District</th></tr>
<tr><th>Financial year</th><th>Documents Registered</th><th>Stamp Duty (in Rs.)</th><th>Registration Fee (in Rs.)</th><th>Total (in Rs.)</th></tr>
<tr><td>01-04-2023 to 31-03-2024</td><td>68,178</td><td>3057,59,16,060</td><td>561,31,34,395</td><td>3618,90,50,455</td></tr>
<tr><td>01-04-2024 to 31-03-2025</td><td>52,062</td><td>2531,52,77,336</td><td>461,75,71,878</td><td>2993,28,49,214</td></tr>
</table>
</td>
</tr>
</table>

ಕಂಇ/92/ಎಂಎನ್‌ಎಸ್‌ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು